# ಪ್ರತಿಕ್ರಿಯೆ




## ರಸದೌತಣ ನೀಡಿತು

ಹನ್ನೊಂದು ಕಂತುಗಳಲ್ಲಿ ಮೂಡಿಬಂದ ಬನವಾಸಿ ವೆಂಕಟೇಶ್ ದೀಕ್ಷಿತರ ಧಾರಾವಾಹಿ 'ನಕ್ಷತ್ರ ನುಂಗುವ ಸಮಯ' ಓದುಗರಿಗೆ ರಸದೌತಣ ನೀಡಿತು. ಶಹರದಿಂದ ದೂರವಾಗಿ ಪ್ರಶಾಂತ ಬದುಕು ಸಾಗಿಸುತ್ತಿದ್ದ ದೇಶ್ವಂತರ ಸಾತ್ವಿಕ ಬದುಕಿನಲ್ಲಿ ಬರುವ ಟೀವಿ ಧಾರಾವಾಹಿಯ ಬಳಗದಿಂದ ಉಂಟಾಗುವ ಕಲ್ಲೋಲ, ರಾಜಕೀಯದಾಟ, ಕುಟುಂಬ ಕಲಹ, ಎಲ್ಲವನ್ನೂ ಹಣವನ್ನಾಗಿ ಪರಿವರ್ತಿಸಲು ಪ್ರಯತ್ನಿಸುವ ಉದ್ಯಮಿಗಳ ಹುನ್ನಾರಗಳು, ದೇಶ್ವಂತರ, ಮಾನಸಿಕ ತುಮುಲ, ಆನಂದ, ಚಂದನಿಕಾರ ನಿರ್ಮಲ ಪ್ರೇಮ ಎಲ್ಲವೂ ಅತ್ಯಂತ ನೈಜತೆಯಿಂದ ಕೂಡಿದೆ.

ಸರಳ, ಸುಂದರ ಭಾಷೆಯಲ್ಲಿ ನಿರೂಪಣೆಗೊಂಡ ಪ್ರಶಾಂತ ಗ್ರಾಮೀಣ ಪರಿಸರ ಪುರಾತನ ಭವನದ ಚಿತ್ರಣ ಕಣ್ಮುದೆ ಕಾಣುವಂತೆ ಬಿಂಬಿಸಲಾಗಿದೆ. ದೇಶ್ವಂತರ, ಆನಂದ ಪಾತ್ರಗಳು ನೈಜತೆಯಿಂದ ಚಿತ್ರಿತವಾಗಿದೆ.

ಪ್ರತಿವಾರವೂ ಧಾರಾವಾಹಿಗಾಗಿಯೇ 'ಸುಧಾ' ಬರವಿಗೆ ಕಾಯುವಂತಾಗಿತ್ತು. ಉತ್ತಮ ಚಿತ್ರ ,ಅಥವಾ ಟೀವಿ ಧಾರಾವಾಹಿಯಾಗಲು ಹೇಳಿ ಮಾಡಿಸಿದಂತಿದೆ. ಕಲಾವಿದ ಮೋನಪ್ಪ ಅವರ ಚಿತ್ರಗಳು ಅತ್ಯಂತ ಸೊಗಸಾಗಿದ್ದವು.

– ಗೀತಾ ನೆಲ್ಲೀಕಾಯಿ, ಬೆಂಗಳೂರು, ಲಕ್ಷ್ಮೀಶ ಹೆಗಡೆ, ಬೆಂಗಳಿ

## ಆರಂಭ ನಾಮಕಾವಸ್ಥೆ; ಅಂತ್ಯ ಪರಿಣಾಮಕಾರಿ

ಕಥೆ ಓದಲು ಸೊಗಸಾಗಿತ್ತು. ಅದರಲ್ಲೂ ಪ್ರಕೃತಿಯ ವರ್ಣನೆ ಕಣ್ಣಿಗೆ ಕಟ್ಟಿದಂತಿತ್ತು, ಕಿರುತೆರೆ ಧಾರಾವಾಹಿ ನಟನೆ ನಿರ್ಮಾಣ ನಿರ್ದೇಶಕ, ನಾಯಕಿ ಇವೆಲ್ಲದರ ನಡುವೆ ನುಸುಳಿದ್ದು ಹಳೆಯ ಬಂಗಲೆಯ ಆಸ್ತಿಗಾಗಿ ವಿಲೇವಾರಿಯ ಬೆಳವಣಿಗೆ, ಅದರ ಬಗ್ಗೆ ಚಿಕ್ಕಚೊಕ್ಕದಾದ ಸಂಬಂಧಪಟ್ಟ ಘಟನೆಗಳು. ಕಡೆಯಲ್ಲಿ ಮೋಸ ಮಾಡಿ ಪಡೆಯಲು ಹೋದರೆ ಆಗುವುದೇ ಹೀಗೆ ಅನ್ನುವ ಸಂದೇಶ.

– ಎನ್.ಎಸ್. ಚಂದ್ರಶೇಖರ್, ಕಸ್ತೂರಿ, ಶ್ವೇತಾ ಮತ್ತು ನವೀನ

## ನಾನೂ ದೇಶ್ವಂತರ ಪರಿವಾರದೊಡನೆ ಒಬ್ಬಳಾದೆ

ಇದೊಂದು ಧಾರಾವಾಹಿ ಎನಿಸಲೇ ಇಲ್ಲ. ದೇಶ್ವಂತರ ಮನೆಯ ಪರಿವಾರದೊಂದಿಗೆ ನಾನೂ ಒಬ್ಬಳಾಗಿ ಅವರೊಂದಿಗೆ ಓಡಾಡಿ, ಹರ್ಷಿಸಿ, ದುಃಖಿಸಿ, ಈಗ ದಿಗ್ಭ್ರಮೆಗೊಂಡು, ಆ ಲೋಕದಿಂದ ಹೊರಬರಲಾಗದೆ ಇದ್ದೇನೆ. ಲೇಖಕರಿಗೆ ನಾನು ಚಿರಋಣಿ.

– ರಜನಿ ರಾಮನಾಥ್, ಮೈತ್ರೇಯಿ ರಾವ್ ಕೊಚ್ಚಿನ್

## ತರಾತುರಿಯ ಅಂತ್ಯ

ಧಾರಾವಾಹಿ ಕುತೂಹಲಕಾರಿ. ಈಗಿನ ಸಮಾಜದ ವರ್ತನೆಗೆ ಅನುಗುಣವಾಗಿಯೂ ಇತ್ತು. ಆದರೆ ಒಮ್ಮೆಲೇ ಮುಗಿಸಬೇಕೆಂಬ ಹಠದಿಂದ ಮುಗಿಸಿದಂತಿದೆ. ಆನಂದ ಚಂದನಿಕಾ, ತಂದೆ ಮಕ್ಕಳ ಬಾಂಧವ್ಯದ ಎಳೆ ಇರಲಿ. ದಯಮಾಡಿ ಕಥೆಯನ್ನು ಮುಂದುವರಿಸಿ ಒಳ್ಳೆಯ ಮುಕ್ತಾಯ ಕೊಡಿ.

– ಶೈಲಶ್ರೀ ಜಿ. ತುಮಕೂರು

## ಮದುವೆ ಮಾಡಬಹುದಿತ್ತು

ಕಾದಂಬರಿಯನ್ನು ಅವಸರ ಅವಸರವಾಗಿ ಮುಗಿಸಿದಂತಿತ್ತು. ಕನಿಷ್ಠ ಪಕ್ಷ ಆನಂದ–ಚಂದನಿಕಾರ ಮದುವೆಯನ್ನಾದರೂ ಅದ್ದೂರಿಯಾಗಿ ಮಾಡಿ ಧಾರಾವಾಹಿ ಮುಗಿಸಬಹುದಿತ್ತು.

– ಸುಮಾ ಮೇಲ್ಕಾರು

